


ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ




Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಸೋಮವಾರ, ನವೆಂಬರ್ 13, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 12+4 (

# ಅಡ್ಯಾರ್: ಸಹ್ಯಾದ್ರಿ ಕಾಲೇಜಿನಲ್ಲಿ ಕ್ಯಾಲಿಪರ್ ಲ್ಯಾಬ್ ಉದ್ಘಾಟನೆ



'ಅಪ್ ಸ್ಕಿಲ್ಲಿಂಗ್ ಎಂಜಿನಿಯರ್ಸ್' ಕ್ಯಾಲಿಪರ್ ಲ್ಯಾಬ್ ಉದ್ಘಾಟಿಸಲಾಯಿತು.

**ಅಡ್ಯಾರ್**, ನ. 12: ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಿಗೆ ಸ್ಟಾರ್ಟ್‌ಅಪ್ ಅನ್ನು ಪ್ರೋತ್ಸಾಹಿಸುವ ಸಲುವಾಗಿ ಸ್ಥಾಪಿಸಿದ 'ಅಪ್ ಸ್ಕಿಲ್ಲಿಂಗ್ ಎಂಜಿನಿಯರ್ಸ್' ಕ್ಯಾಲಿಪರ್ ಎಂಜಿನಿಯರಿಂಗ್ ಮತ್ತು ಲ್ಯಾಬ್ ಪ್ರೈ.ಲಿ. ಉದ್ಘಾಟಿಸಲಾಯಿತು.

ಸಾಯಿ ಸೃಷ್ಟಿ ಗ್ರೂಪ್(ಎಸ್‌ಎಸ್‌ಜಿ)ನ ಚೇರ್ಮನ್ ಶ್ರೀನಾದ ರೆಡ್ಡಿ ನಯಾನಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ವಿ.ಸುಬ್ರಹ್ಮಣ್ಯನ್, ಕೆನರಾ ಬ್ಯಾಂಕ್ ಮಂಗಳೂರು ವೃತ್ತದ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ವಸಂತ ಶೆಟ್ಟಿ ಭಂಡಾರಿ ಫೌಂಡೇಶನ್ ಟ್ರಸ್ಟಿ ಕೆ.ಬಾಲ ಕೃಷ್ಣ ಭಂಡಾರಿ, ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ ಡಾ। ಮಂಜುನಾಥ್ ಭಂಡಾರಿ, ಕ್ಯಾಲಿಪರ್ ಸಂಸ್ಥೆಯ ಸಿಇಒ ಸುಂದರ್, ನಿರ್ದೇಶಕ ಪ್ರಸನ್ನ ಭಂಡಾರಿ ಮೊದಲಾದವರು ಉಪಸ್ಥಿತರಿದ್ದರು.

ಮಂಗಳೂರು
ಭಾನುವಾರ
12 ನವೆಂಬರ್ 2017
ಹೇಮಲಂಬಿ ಸಂವತ್ಸರ,
ದಕ್ಷಿಣಾಯನ, ಶರದೃತು,
ಕಾರ್ತಿಕ ಮಾಸ,
ಕೃಷ್ಣ ಪಕ್ಷ, ತಿಥಿ: ನವಮಿ,
ನಕ್ಷತ್ರ : ಮಘ
ಬೆಲೆ ₹ 5.00

ರಾಷ್ಟ್ರ ಜಾಗೃತಿಯ
# ಹೊಸ ದಿಗಂ


ಅಭಿವೃದ್ಧಿಗಾಗಿ ಗುಜರಾತ್‌ಗೆ ಬಿಜೆಪಿ ಅಗತ್ಯ: ನಿರ್ಮಲಾ 10


ಆಯುರ್ವೇದ ಔಷಧವೇ ಸೂಕ್ತ: ಡಾ.ವೀರೇಂದ್ರ ಹೆಗ್ಗಡೆ 9


ರಣಜಿ: ಕರ್ನಾಟಕದ ವಿ
ಗಂಭೀರ್ ಶತಕ, ದಿಲ್ಲಿಗೆ
372 ರನ್ ಹಿನ್ನಡೆ

ಸಂಪುಟ 39, ಸಂಚಿಕೆ 225, ಪುಟಗಳು 12+4+4, ಬೆಂಗಳೂರು-ಮಂಗಳೂರು-ಶಿವಮೊಗ್ಗ-ಹುಬ್ಬಳ್ಳಿ | diganthamlr@gmail.com | website: www.hosadigantha.com | REG.No.MNG / 121 / 2015-17 Posted at kodialbail P

### ಸಹ್ಯಾದ್ರಿ ಕಾಲೇಜಿನಲ್ಲಿ ಸಾಯನ್ಸ್ ಹಂಟ್ 2017

# ವಿದ್ಯಾರ್ಥಿಗಳಿಂದ ನಿರ್ಮಿತ ವಿಜ್ಞಾನ ಮಾದರಿಗಳ ಸ್ಪರ್ಧೆ-ಪ್ರದರ್ಶನ

ದಿಗಂತ ವರದಿ : ಮಂಗಳೂರು, ನ.11



ನಗರದ ಹೊರ ವಲಯ ಅಡ್ಯಾರಿನ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್‌ನಲ್ಲಿ ಹಮ್ಮಿಕೊಳ್ಳಲಾದ 'ಸಹ್ಯಾದ್ರಿ ಟ್ಯಾಲೆಂಟಂ ಹಂಟ್-2017'ನ್ನು ಬೆಂಗಳೂರಿನ ಏರೋಸ್ಪೇಸ್ ಇಂಜಿನಿಯರಿಂಗ್, ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯ ಸಂಶೋಧನಾ ವಿಜ್ಞಾನಿ ಪ್ರೊ.ಎಸ್.ಎನ್. ಓಂಕಾರ್ ಶನಿವಾರ ಉದ್ಘಾಟಿಸಿದರು.

ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗದ 70ಪಿಯು ಕಾಲೇಜುಗಳು ಮತ್ತು 40 ಪ್ರೌಢಶಾಲೆಗಳ ವಿದ್ಯಾರ್ಥಿಗಳು ಸಿದ್ಧಪಡಿಸಿದ ಸುಮಾರು 250 ಆಯ್ದ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಲಾಯಿತು.

**ಮಕ್ಕಳಿಗೆ ಪ್ರೋತ್ಸಾಹ**

ವಿವಿಧ ಭಾಗಗಳಿಂದ ಬಂದ ಅಂದಾಜು 1,400 ವಿಜ್ಞಾನ ಮಾದರಿಗಳ ಪೈಕಿ ಅಂತಿಮ ಸುತ್ತಿಗೆ ಅಂದಾಜು 250 ಮಾದರಿಗಳನ್ನು ಆಯ್ಕೆ ಮಾಡಲಾಗಿತ್ತು.

ಹೆಚ್ಚು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಸ್ಪರ್ಧಾ ಪ್ರದೇಶವನ್ನು ನಾಲ್ಕು ವಲಯಗಳಾಗಿ ವಿಂಗಡಿಸಲಾಗಿತ್ತು. ಮಂಗಳೂರು, ಮಂಗಳೂರು ಗ್ರಾಮಾಂತರ, ಕುಂದಾಪುರ ಮತ್ತು ಶಿವಮೊಗ್ಗ ವಲಯಗಳಲ್ಲಿ ಸ್ಪರ್ಧೆ ಆಯೋಜಿಸಲಾಗಿತ್ತು.



ಈ ಸಂದರ್ಭದಲ್ಲಿ ಮಾತನಾಡಿದ ಪ್ರೊ.ಓಂಕಾರ್ ವಿದ್ಯಾರ್ಥಿಗಳ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ಜತೆಗೆ ಇಂದಿನ ಕಾಲಘಟ್ಟಕ್ಕೆ ಅಗತ್ಯವಾದ ಹೊಸ ಹೊಸ ಆವಿಷ್ಕಾರಗಳತ್ತಲೂ ಗಮನ ಹರಿಸ ಬೇಕು ಎಂದು ಕಿವಿಮಾತು ಹೇಳಿದರು.

ಸಹ್ಯಾದ್ರಿ ಸಂಸ್ಥೆಯ ಚೆಯರ್‌ಮನ್ ಮಂಜುನಾಥ ಭಂಡಾರಿ, ಭಂಡಾರಿ ಪ್ರತಿಷ್ಠಾನದ ಟ್ರಸ್ಟಿ ಕೆ.ಬಾಲಕೃಷ್ಣ ಭಂಡಾರಿ, ಸಾಯಿ ಸೊಲೂಷನ್ಸ್‌ನ ಆಡಳಿತ ನಿರ್ದೇಶಕ ಎಸ್.ರೆಡ್ಡಿ, ಬೆಂಗಳೂರಿನ ನಾಗರಾಜ ಶೆಟ್ಟಿ, ಶಿವಮೊಗ್ಗದ ವಿಜಯಕುಮಾರ್, ಹಳೆ ವಿದ್ಯಾರ್ಥಿಗಳಾದ ಸೂರಜ್ ಶೆಟ್ಟಿ ಮತ್ತು ರಕ್ಷಿತ್ ಬಿ.ಡಿ ಅತಿಥಿಗಳಾಗಿ ಪಾಲ್ಗೊಂಡರು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮೆನೇಜ್‌ಮೆಂಟ್ ಕಾಲೇಜಿನ ಪ್ರಾಂಶುಪಾಲ ಡಾ.ಯು.ಎಂ.ಭೂಷಿ, ಉಪ ಪ್ರಾಂಶುಪಾಲ ಪ್ರೊ.ಬಾಲಕೃಷ್ಣ ಎಸ್.ಎಸ್, ನಿರ್ದೇಶಕ ಡಾ.ಡಿ.ಎಲ್.ಪ್ರಭಾಕರ, ಎಸ್‌ಎಸ್‌ಟಿಎಚ್ ನಿರ್ದೇಶಕ ಡಾ.ಸಿ.ಕೆ. ಮಂಜುನಾಥ್ ಉಪಸ್ಥಿತರಿದ್ದರು.

ಅಪರಾಹ್ನ ಬೆಂಗಳೂರಿನ ಏರೋಸ್ಪೇಸ್‌ನ ಪ್ರೊ.ಎಸ್.ಎನ್.ಓಂಕಾರ್, . ಎನ್‌ಐಟಿಕೆಯ ಪ್ರೊ.ವಿಜಯ್ ದೇಸಾಯಿ, ಫ್ಯೂಚರ್ ಫೋಕಸ್ ಇನ್ನೋಟೆಕ್‌ನ ಎಂ.ವಿ.ಸುಬ್ರಹ್ಮಣ್ಯನ್ ಜತೆ ವಿದ್ಯಾರ್ಥಿಗಳ ಸಂವಹನ ಕಾರ್ಯಕ್ರಮ ನಡೆಯಿತು.

www.varthabharati.in ಜನದನಿಯ ಸಾರಥಿ epaper.varthabharati.in

# ವಾರ್ತಾ ಭಾರತಿ

ಸತ್ಯ ಎಲ್ಲರಿಗೆ

◆ ಮಂಗಳೂರು ◆ ಬೆಂಗಳೂರು ◆ ಶಿವಮೊಗ್ಗ

12 ನವೆಂಬರ್ 2017
ರವಿವಾರ

VARTHABHARATHI KANNADA DAILY

/ Varthabharati REGD.NO: MNG/958/2016-18 RNI N0. KAR KAN/2003/11378 ● ಸಂಪುಟ 15 ● ಸಂಚಿಕೆ 73 ● ಮಂಗಳೂರು ● ಪುಟ 12+4

CENTRAL LIBRARY

# ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್‌ನಲ್ಲಿ ವಿಜ್ಞಾನ ಮಾದರಿಗಳ ಮಹಾಪೂರ

ಮಂಗಳೂರು, ನ.11: ವಿಜ್ಞಾನದ ಅನ್ವೇಷಣೆಯೆಡೆಗೆ ಯುವಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಪಿಯುಸಿ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಆಯೋಜಿಸಿರುವ 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್-2017' ಪ್ರತಿಭಾನ್ವೇಷಣಾ ಸ್ಪರ್ಧೆಯಲ್ಲಿ ವಿಜ್ಞಾನ ಮಾದರಿಗಳ ಮಹಾಪೂರವೇ ಹರಿದು ಬಂದಿದೆ.

ಮಂಗಳೂರು ನಗರ, ಮಂಗಳೂರು ಹೊರವಲಯ, ಶಿವಮೊಗ್ಗ, ಕುಂದಾಪುರ ಈ ನಾಲ್ಕು ವಲಯಗಳಿಂದ 70 ಶಾಲಾ ಕಾಲೇಜುಗಳ 1,400ರಷ್ಟು ವಿದ್ಯಾರ್ಥಿಗಳು ಈ ವಿಜ್ಞಾನ ಮಾದರಿಗಳ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. 250ಕ್ಕೂ ಅಧಿಕ ವಿಜ್ಞಾನದ ವಿವಿಧ ಆಯಾಮಗಳ ಮಾದರಿಗಳನ್ನು ಸ್ಪರ್ಧಿಗಳು ಪ್ರದರ್ಶಿಸಿದರು.


ವಿದ್ಯಾರ್ಥಿಗಳು ರಚಿಸಿರುವ ವಿಜ್ಞಾನದ ವಿನೂತನ ಅವಿಷ್ಕಾರಗಳ ಬಗ್ಗೆ ವಿವರಿಸುತ್ತಿರುವುದು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಒಳ ಆವರಣದಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್‌ನ ಏರೋಸ್ಪೇಸ್ ಇಂಜಿನಿಯರ್ ವಿಭಾಗದ ಪ್ರೊ.ಎಸ್.ಎನ್.ಓಂಕಾರ್ ಪ್ರತಿಭಾ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

80 ಮಂದಿ ಪ್ರಾಧ್ಯಾಪಕರು ಈ ಪ್ರದರ್ಶನದಲ್ಲಿನ ವಿಜ್ಞಾನ ಮಾದರಿಗಳ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿದ್ದರು. ವಿಜ್ಞಾನದ ವಿನೂತನ ಅವಿಷ್ಕಾರಗಳನ್ನು ವಿದ್ಯಾರ್ಥಿಗಳು ತಮ್ಮ ಆಲೋಚನೆ, ವಿಚಾರಗಳಿಗೆ ಒತ್ತು ನೀಡಿ ಮಾದರಿಗಳ ರೂಪದಲ್ಲಿ ಪ್ರದರ್ಶನ ಹಾಗೂ ವಿವರಣೆ ನೀಡುವ ಮೂಲಕ ಗಮನ ಸೆಳೆದರು.

ಕಸದಿಂದ ರಸವೆಂಬಂತೆ, ಕೆಲವೊಂದು ತ್ಯಾಜ್ಯಗಳನ್ನು ಉಪಯೋಗಿಸಿ ಅದಕ್ಕೆ ತಾಂತ್ರಿಕ ಸ್ಪರ್ಶ ನೀಡಲಾದ ವಿಜ್ಞಾನ ಮಾದರಿಗಳು ಕೂಡಾ ಪ್ರದರ್ಶನದಲ್ಲಿದ್ದವು. ಜೈವಿಕ ತಂತ್ರಜ್ಞಾನ, ಮಾನವನ ಒಳ ಅಂಗಾಂಗಗಳ ರಚನೆ, ವ್ಯಾಕ್ಯೂಮ್ ಕ್ಲೀನರ್, ನೀರು ಶುದ್ಧೀಕರಣ ಘಟಕ, ಸ್ಟೋರೇಜ್ ಹೌಸ್, ಇಲೆಕ್ಟ್ರಿಫಯಿಂಗ್ ಪೇಂಯ್ಟ್, ಹ್ಯೂಮನಾಯ್ಡ್ ರಾಬಟ್ ಹೀಗೆ ವಿವಿಧ ತೆರನಾದ ಮಾದರಿಗಳು ಎಸೆಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳ ವೈಜ್ಞಾನಿಕ ಪ್ರತಿಭೆಗೆ ಸಾಕ್ಷಿಯಾಗಿದ್ದವು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು ಎನ್‌ಐಟಿಕೆ, ಎನ್‌ಐಟಿ ಕ್ಯಾಲಿಕಟ್, ಎನ್‌ಐಟಿ ಸಿಕ್ಕಿಂ, ಐಐಟಿ ಗಾಂಧಿನಗರ, ಎನ್‌ಐಟಿಕೆ ವಾರಂಗಲ್, ಎಸ್‌ಆರ್‌ಎಂ ಯುನಿವರ್ಸಿಟಿ, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎನ್‌ಐಟಿ ಭೋಪಾಲ್, ಐಐಟಿ ಮುಂಬೈ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಅಗ್ರ ಬಹುಮಾನಗಳನ್ನು ಪಡೆದಿರುವ ಆ್ಯಪ್ ಆಧಾರಿತ ವಿಜ್ಞಾನ ಮಾದರಿಗಳ ಪ್ರದರ್ಶನವನ್ನೂ ಈ ಸಂದರ್ಭ ಆಯೋಜಿಸಲಾಗಿತ್ತು.

ಉದ್ಘಾಟನಾ ಸಮಾರಂಭದಲ್ಲಿ ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಡಾ.ಮಂಜುನಾಥ್ ಭಂಡಾರಿ ಅಧ್ಯಕ್ಷತೆ ವಹಿಸಿದ್ದು, ಸುರತ್ಕಲ್ ಎನ್‌ಐಟಿಕೆಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ವಿಜಯ ಎಚ್.ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ವಿ.ಸುಬ್ರಹ್ಮಣ್ಯನ್, ನಾಗರಾಜ ಶೆಟ್ಟಿ, ವಿಜಯ ಕುಮಾರ್, ಸೂರಜ್ ಶೆಟ್ಟಿ, ರಕ್ಷಿತ್ ಹಾಗೂ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಯು.ಎಂ.ಭೂಷಿ, ಸಂಸ್ಥೆಯ ಆಡಳಿತಾಧಿಕಾರಿ ಡಾ.ಸಿ.ಕೆ. ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು.


ಭಾನುವಾರ, ನವೆಂಬರ್ 12, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 312 | ಪುಟ 22 + 2
www.prajavani.net
/prajavani.net

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY Sahyadri College ... Adyar, Mangaluru

ಮುಕ್ತಛಂದ
ಬಾಲ್ಯದ ಸಂಭ್ರಮವನ್ನು ವಿವಿಧ ರೀತಿಗಳಲ್ಲಿ ಹಿಡಿದಿಡುವ 'ಮಕ್ಕಳ ಸಂಚಿಕೆ'



ಹೊಂಬು: ಹಳೆ ಮದ್ದು ಪರಿಹಾರವಲ್ಲ 7
ಕರ್ನಾಟಕವೂ ಫಲಾನುಭವಿ: ಗಡ್ಕರಿ ಪ್ರಕಟ
ಮಹಾಮಜ್ಜನಕ್ಕೆ ವಿದ್ಯುತ್ ಅಬಾಧಿತ 5
ವಿಶ್ವ ಬ್ಯಾಂಕ್ ನೆರವಿನ ನೀರಾವರಿ ಯೋಜನೆ 8



## ಟ್ಯಾಲೆಂಟ್ ಹಂಟ್

ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಮಂಗಳೂರು, ಇದರ ವತಿಯಿಂದ ಪಿಯುಸಿ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಶನಿವಾರ ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್-2017 ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿಜ್ಞಾನ ಪ್ರಾತ್ಯಕ್ಷಿಕೆ ತೋರಿಸಿದರು.

ಪ್ರಜಾವಾಣಿ ಚಿತ್ರ

### ಕಸದಿಂದ ರಸಕ್ಕೆ ತಾಂತ್ರಿಕ ಸ್ಪರ್ಶ ನೀಡಿದ ಪಿಯುಸಿ, ಹೈಸ್ಕೂಲ್ ವಿದ್ಯಾರ್ಥಿಗಳು

# ಸಹ್ಯಾದ್ರಿ: ವಿಜ್ಞಾನ ಮಾದರಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಜ್ಞಾನದ ಅನ್ವೇಷಣೆ ಕಡೆಗೆ ಯುವಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಪಿಯುಸಿ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗಾಗಿ ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್-2017ನ್ನು ಸಹ್ಯಾದ್ರಿ ಆವರಣದಲ್ಲಿ ಶನಿವಾರ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಶೋಧನಾ ವಿಜ್ಞಾನಿ ಪ್ರೊ.ಎಸ್.ಎನ್. ಓಂಕಾರ್ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಂಗಳೂರು ನಗರ, ಮಂಗಳೂರು ಹೊರವಲಯ, ಶಿವಮೊಗ್ಗ ಹಾಗೂ ಕುಂದಾಪುರ ಹೀಗೆ 4 ವಲಯಗಳಿಂದ ಒಟ್ಟು 1400 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದರಲ್ಲಿ ಜೈವಿಕ ಒಳ ತಂತ್ರಜ್ಞಾನ, ಮಾನವನ ಒಳ ಅಂಗಾಂಗ ರಚನೆ, ವ್ಯಾಕ್ಯೂಮ್ ಕ್ಲೀನರ್ ಹೀಗೆ ಒಟ್ಟು 250 ವಿವಿಧ ರೀತಿಯ ವಿಜ್ಞಾನ ಮಾದರಿಗಳನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.



ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು ವತಿಯಿಂದ ಶನಿವಾರ ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್–2017 ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿಜ್ಞಾನ ಪ್ರಾತ್ಯಕ್ಷಿಕೆ ತೋರಿಸಿದರು.

ವಿವಿಧ ವಿಭಾಗದ ಪ್ರಾತ್ಯಕ್ಷಿಕೆಗಳನ್ನು ಒಟ್ಟು 80 ಪ್ರಾಧ್ಯಾಪಕರು ಮೌಲ್ಯಮಾಪನ ಮಾಡಿದರು.

ಪ್ರಾತ್ಯಕ್ಷಿಕೆಯಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ನಗದು, ಟ್ರೋಫಿ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. ಸಹ್ಯಾದ್ರಿ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು ಎನ್‌ಐಟಿಕೆ, ಎನ್‌ಐಟಿ ಕ್ಯಾಲಿಕಟ್, ಎನ್‌ಐಟಿ ಸಿಕ್ಕಿಂ, ಐಐಟಿ ಗಾಂಧಿನಗರ, ಎನ್‌ಐಟಿಕೆ ವಾರಂಗಲ್, ಎಸ್‌ಆರ್‌ಎಂ ಯುನಿವರ್ಸಿಟಿ, ಎನ್‌ಐಟಿ ಮುಂಬೈ ಹೀಗೆ ಪ್ರತಿಷ್ಠಿತ ಪ್ರದರ್ಶನಗಳಲ್ಲಿ ಬಹುಮಾನ ಪಡೆದಿರುವ ಆ್ಯಪ್ ಆಧಾರಿತ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು. ಸುರತ್ಕಲ್ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ.ವಿಜಯ್ ಹೆಚ್. ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹಸಂಸ್ಥಾಪಕ ಎಂ.ವಿ. ಸುಬ್ರಮಣಿಯನ್, ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಯು.ಎಂ.ಭೂಷಿ, ಸಂಸ್ಥೆಯ ಆಡಳಿತಾಧಿಕಾರಿ ಸಿ.ಕೆ ಮಂಜುನಾಥ್, ನಾಗರಾಜ್ ಶೆಟ್ಟಿ, ವಿಜಯ್ ಕುಮಾರ್, ಸೂರಜ್ ಶೆಟ್ಟಿ, ರಕ್ಷಿತ್ ಉಪಸ್ಥಿತರಿದ್ದರು.

ಸಂಪುಟ 59 | ಸಂಚಿಕೆ 269 | ಪುಟ 12+6 epaper.samyukthakarnataka.com ಮಂಗಳೂರು | ಹುಬ್ಬಳ್ಳಿ | ಕಲಬುರ

ಸಂಯುಕ್ತ ಕರ್ನಾಟಕ

ಕನ್ನಡಿಗರ ಸಾಕ್ಷಿಪ್ರಜ್ಞೆ

ಎಂಟು ದಶಕದ ನಂಟು

ಭಾನುವಾರ 12 | ನವೆಂಬರ್ 2017 | ₹ 5–00

ಸುಜ್ಞಾನ

ಯಾರನ್ನಾದರೂ ಮರೆಯುವುದಾದರೆ ಮರೆತುಬಿಡಿ, ಆದರೆ! ಯಾರನ್ನು ಮರೆತಿದ್ದೇವೆ ಎಂಬುವುದನ್ನು ನೆನಪಿಟ್ಟುಕೊಳ್ಳಿ

ಗಡಿಯಲ್ಲಿ ಆಧುನಿಕ ವಾಯುನೆಲೆ ಪುಟ - 12

ಪಶ್ಚಿಮ ಜರ್ಮನಿಯ ಕಲೋನ್ ನಗರದಲ್ಲಿ ಜರುಗಿದ 'ಆಮೋದ-ಪ್ರಮೋದ'ದಲ್ಲಿ ಯುವತಿ ಸಂಭ್ರಮಿಸಿದ್ದು ಹೀಗೆ.

# ವಿಜ್ಞಾನದ ಅನ್ವೇಷಣೆಗೆ ಯುವಕರ ಆಕರ್ಷಣೆ



**ಮಂಗಳೂರು:** ವಿಜ್ಞಾನದ ಅನ್ವೇಷಣೆಯೆಡೆಗೆ ಯುವಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಪಿಯುಸಿ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್–2017' ಪ್ರತಿಭಾನ್ವೇಷಣಾ ಸ್ಪರ್ಧೆ ನಡೆಯಿತು.

ಮಂಗಳೂರಿನ ಜತೆಗೆ ಶಿವಮೊಗ್ಗ, ಕುಂದಾಪುರದಿಂದ 70 ಶಾಲಾ ಕಾಲೇಜುಗಳ 1400ರಷ್ಟು ವಿದ್ಯಾರ್ಥಿಗಳು ಈ ವಿಜ್ಞಾನ ಮಾದರಿಗಳ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದಾರೆ. 250ಕ್ಕೂ ಅಧಿಕ ವಿಜ್ಞಾನದ ವಿವಿಧ ಆಯಾಮಗಳ ಮಾದರಿಗನ್ನು ಸ್ಪರ್ಧಿಗಳು ಪ್ರದರ್ಶಿಸಿದರು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಒಳ ಆವರಣದಲ್ಲಿ ಬೆಂಗಳೂರಿನ ಇಂಡಿಂ–ಯನ್ ಇನ್‌ಸ್ಟಿಟ್ಯೂಟ್ ಆಫ್ ಸಾಯನ್ಸ್‌ನ ಏರೋಸ್ಪೇಸ್ ಇಂಜಿನಿಯರ್ ವಿಭಾಗದ ಪ್ರೊ. ಎಸ್.ಎನ್. ಓಂಕಾರ್ ಪ್ರತಿಭಾ ಪ್ರದರ್ಶನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಸದಿಂದ ರಸವೆಂಬಂತೆ, ಕೆಲವೊಂದು ತ್ಯಾಜ್ಯಗಳನ್ನು ಉಪಯೋಗಿಸಿ ಅದಕ್ಕೆ ತಾಂತ್ರಿಕ ಸ್ಪರ್ಶ ನೀಡಲಾದ ವಿಜ್ಞಾನ ಮಾದರಿಗಳು ಕೂಡಾ ಪ್ರದರ್ಶನದಲ್ಲಿದ್ದವು. ಜೈವಿಕ ತಂತ್ರಜ್ಞಾನ, ಮಾನವನ ಒಳ ಅಂಗಾಂಗಳ ರಚನೆ, ವ್ಯಾಕ್ಯೂಮ್ ಕ್ಲೀನರ್, ನೀರು ಶುದ್ಧೀಕರಣ ಘಟಕ, ಸ್ಟೋರೇಜ್ ಹೌಸ್, ಇಲೆಕ್ಟ್ರಿಫಯಿಂಗ್ ಪೇಂಯ್ಟ್, ಹ್ಯೂಮನಾಯ್ಡ್ ರಾಬಟ್ ಹೀಗೆ ವಿವಿಧ ತೆರನಾದ ಮಾದ–ರಿಗಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳ ವಿಜ್ಞಾನ ಪ್ರತಿಭೆಗೆ ಸಾಕ್ಷಿಯಾಗಿದ್ದವು. ಸಹ್ಯಾದ್ರಿ ಶಿಕ್ಷಣ ಸಂಸ್ಥೆ ಅಧ್ಯಕ ಡಾ. ಮಂಜುನಾಥ್ ಭಂಡಾರಿ ಅಧ್ಯಕ್ಷತೆ ವಹಿಸಿದ್ದು, ಹಿರಿಯ ಪ್ರಾಧ್ಯಾಪಕ ಪ್ರೊ.ವಿ–ಜಯ ಎಚ್. ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ವಿ. ಸುಬ್ರಹ್ಮಣ್ಯನ್, ನಾಗರಾಜ ಶೆಟ್ಟಿ, ವಿಜಯ ಕುಮಾರ್, ಸೂರಜ್ ಶೆಟ್ಟಿ, ರಕ್ಷಿತ್ ಹಾಗೂ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ಯು.ಎಂ. ಭೂಶಿ, ಸಂಸ್ಥೆಯ ಆಡಳಿತಾಧಿಕಾರಿ ಡಾ.ಸಿ.ಕೆ. ಮಂಜುನಾಥ್ ಹಾಜರಿದ್ದರು.

ಸಾಪ್ತಾಹಿಕ
ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ
Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ರವಿವಾರ, ನವೆಂಬರ್ 12, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00 ಪುಟಗಳು 14+8+4

CENTRAL LIBRARY
Sahyadri College, Adyar, Mangalore-7

## ಅಡ್ಯಾರ್ ಸಹ್ಯಾದ್ರಿ ಕಾಲೇಜು

# ಸೈನ್ಸ್ ಟ್ಯಾಲೆಂಟ್ ಹಂಟ್-2017 ಸ್ಪರ್ಧೆ



ಪ್ರತಿಭಾನ್ವೇಷಣಾ ಸ್ಪರ್ಧೆಯನ್ನು ವಿಜ್ಞಾನಿ ಪ್ರೊ। ಎಸ್.ಎನ್.ಓಂಕಾರ್ ಅವರು ಉದ್ಘಾಟಿಸಿದರು.

ಮಂಗಳೂರು, ನ. 11: ವಿದ್ಯಾರ್ಥಿಗಳನ್ನು ಸಂಶೋಧನೆಗಳಲ್ಲಿ ತೊಡಗಿಸುವ ನಿಟ್ಟಿನಲ್ಲಿ ಮಂಗಳೂರು ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಹಮ್ಮಿಕೊಂಡಿರುವ ಪಿಯುಸಿ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳ 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್-2017' ಪ್ರತಿಭಾನ್ವೇಷಣಾ ಸ್ಪರ್ಧೆ ಶನಿವಾರ ಅಡ್ಯಾರ್ ಕ್ಯಾಂಪಸ್‌ನಲ್ಲಿ ನಡೆಯಿತು.

ಸ್ಪರ್ಧೆಯನ್ನು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಏರೋಸ್ಪೇಸ್ ಎಂಜಿನಿಯರ್ ವಿಭಾಗದ ವಿಜ್ಞಾನಿ ಪ್ರೊ। ಎಸ್.ಎನ್. ಓಂಕಾರ್ ಅವರು ಉದ್ಘಾಟಿಸಿದರು. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ। ಮಂಜುನಾಥ್ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು.

ಅತಿಥಿಗಳಾಗಿ ಸುರತ್ಕಲ್ ಎನ್‌ಐಟಿಕೆಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಪ್ರೊ। ವಿಜಯ ಎಚ್.ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎಂ.ವಿ.ಸುಬ್ರಹ್ಮಣ್ಯನ್, ನಾಗರಾಜ್ ಶೆಟ್ಟಿ ಬೆಂಗಳೂರು, ವಿಜಯ ಕುಮಾರ್ ಶಿವಮೊಗ್ಗ, ಸೂರಜ್ ಶೆಟ್ಟಿ ರಕ್ಷಿತ್ ಬಿ.ಡಿ, ಸಂಸ್ಥೆಯ ನಿರ್ದೇಶಕ ಡಾ। ಡಿ.ಎಲ್.ಪ್ರಭಾಕರ, ಪ್ರಾಂಶುಪಾಲ ಡಾ। ಯು.ಎಂ. ಭೂಶಿ, ಉಪಪ್ರಾಂಶುಪಾಲ ಪ್ರೊ। ಎಸ್.ಎಸ್.ಬಾಲಕೃಷ್ಣ ಕಾರ್ಯಕ್ರಮ ಸಂಯೋಜಕ ಡಾ। ಸಿ.ಕೆ.ಮಂಜುನಾಥ್ ಭಾಗವಹಿಸಿದ್ದರು.

### 250ಕ್ಕೂ ಅಧಿಕ ಮಾದರಿಗಳು

ಪ್ರತಿಭಾನ್ವೇಷಣಾ ಸ್ಪರ್ಧೆಯಲ್ಲಿ ಮಂಗಳೂರು ನಗರ, ಮಂಗಳೂರು ಹೊರವಲಯ, ಶಿವಮೊಗ್ಗ, ಕುಂದಾಪುರ ಹೀಗೆ 4 ವಲಯಗಳ ಸುಮಾರು 70 ವಿದ್ಯಾಸಂಸ್ಥೆಗಳ 1400 ವಿದ್ಯಾರ್ಥಿಗಳ ಭಾಗವಹಿಸಿದ್ದರು. ವಿದ್ಯಾರ್ಥಿಗಳೇ ಅನ್ವೇಷಿಸಿದ 250ಕ್ಕೂ ಅಧಿಕ ಮಾದರಿಗಳು ಪ್ರದರ್ಶಿತಗೊಂಡಿದ್ದವು. ಸುಮಾರು 80 ಮಂದಿ ಪರಿಣತ ಪ್ರಾಧ್ಯಾಪಕರು ಮೌಲ್ಯಮಾಪನ ಕಾರ್ಯ ನಡೆಸಿದರು.

ಜೈವಿಕ ತಂತ್ರಜ್ಞಾನ, ಮಾನವನ ದೇಹದ ಅಂಗಾಂಗ ರಚನೆ, ವ್ಯಾಕ್ಯೂಮ್ ಕ್ಲೀನರ್, ನೀರು ಶುದ್ಧೀಕರಣ ಯಂತ್ರ, ಸ್ಟೋರೇಜ್ ಹೌಸ್, ಎಲೆಕ್ಟ್ರಾನಿಕ್ ಪೈಂಟಿಂಗ್, ರೋಬೋಟ್, ಸ್ಮಾರ್ಟ್ ಸಿಟಿ, ಆಪ್ ಆಧರಿತ ವಿಜ್ಞಾನ ಮಾದರಿಗಳು ಹೀಗೆ ನೂರಾರು ಬಗೆಯ ಮಾದರಿಗಳು ಸ್ಪರ್ಧೆಯಲ್ಲಿದ್ದು ಗಮನ ಸೆಳೆದವು.

ಭಾನುವಾರ,12 ನವೆಂಬರ್ 2017 | ಪುಟಗಳು: 16+6+4(UDP8) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 106
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಅರುಣಾಚಲ ಭಾರತಕ್ಕೆ ಸೇರಿದ್ದು, ಇತರರ ನಿಲುವು ಲೆಕ್ಕಕ್ಕಿಲ್ಲ: ನಿರ್ಮಲಾ ಸೀತಾರಾಮನ್

ಶಶಿಕಲಾ, ದಿನಕರನ್ ಸಂಬಂಧಿಗಳಿಗೆ 3ನೇ ದಿನವೂ ಐಟಿ ಶಾಕ್ P01

ಆಸಿಯಾನ್ ಶೃಂಗದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಫಿಲಿಪ್ಪೀನ್ಸ್‌ಗೆ P10

# ಆರ್ಥಿಕ ಕಾರಣಕ್ಕಾಗಿ ಅನ್ವೇಷಣೆಯಿಂದ ಹಿಂದೆ ಸರಿಯ ಬಾರದು: ಪ್ರೊ. ಓಂಕಾರ್

**ಮಂಗಳೂರು:** ಆರ್ಥಿಕವಾಗಿ ಸದೃಢನಲ್ಲ ಎನ್ನುವ ಕಾರಣಕ್ಕೆ ಅನ್ವೇಷಣೆ ಯಿಂದ ಹಿಂದಕ್ಕೆ ಸರಿಯಬಾರದು. ಅನ್ವೇಷಣೆಗೆ ಆರ್ಥಿಕ ಸಂಪನ್ಮೂಲದ ಆವಶ್ಯಕತೆಯಿಲ್ಲ, ವಿಶ್ವದಲ್ಲಿ ನಡೆದ ಯಶಸ್ವಿ ಅನ್ವೇಷಣೆಗಳು ಗರಿಷ್ಠ ಆರ್ಥಿಕ ಹೂಡಿಕೆಯಿಂದ ಆಗಿಲ್ಲ, ಸಾಮಾನ್ಯ ಅನ್ವೇಷಣೆಗಳನ್ನೇ ಅಭಿವೃದ್ಧಿ ಪಡಿಸಿ ಲೋಕಕ್ಕೆ ಪರಿಚಯಿಸಲಾಗಿದೆ ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಏರೋಸ್ಪೇಸ್ ಎಂಜಿನಿಯರ್ ವಿಭಾಗದ ಮುಖ್ಯ ಸಂಶೋಧನಾ ವಿಜ್ಞಾನಿ ಪ್ರೊ. ಎಸ್.ಎನ್. ಓಂಕಾರ್ ಅಭಿಪ್ರಾಯಪಟ್ಟರು.

ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಪಿಯುಸಿ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗಾಗಿ ಕಾಲೇಜು ಆವರಣದಲ್ಲಿ ಶನಿವಾರ ಹಮ್ಮಿಕೊಂಡ ಪ್ರತಿಭಾನ್ವೇಷಣೆ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸಲು ಸಹ್ಯಾದ್ರಿ ಕಾಲೇಜು ಯುವ ಅನ್ವೇಷಕರಿಗೆ ಅವಕಾಶ ಕಲ್ಪಿಸಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಅವರ ಸಾಧನೆಗೆ ಇನ್ನಷ್ಟು ಪ್ರೋತ್ಸಾಹ ದೊರೆತಂತಾಗುತ್ತದೆ. ಅನ್ವೇಷಣೆಗೆ ಹೊಸ ಯೋಚನೆಗಳು ಮೂಡಲು ಪೂರಕವಾಗುತ್ತದೆ ಎಂದವರು ಅಭಿಪ್ರಾಯಪಟ್ಟರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಮಾತನಾಡಿ, ಯುವ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಪ್ರತಿಭಾನ್ವೇಷಣೆ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಎಲ್ಲ ಕಾಲೇಜುಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ ಎಂದರು.

ಸುರತ್ಕಲ್ ಎನ್‌ಐಟಿಕೆಯ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ವಿಜಯ ಎಚ್. ದೇಸಾಯಿ, ಫ್ಯೂಚರ್ ಫೋಕಸ್ ಇನ್ನೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ವಿ. ಸುಬ್ರಹ್ಮಣ್ಯನ್, ಅಂಕಣಕಾರ ಬಸನಗೌಡ ಎಂ. ಪಾಟೀಲ್, ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ನಿರ್ದೇಶಕ ಡಾ.ಡಿ.ಎಲ್ .ಪ್ರಭಾಕರ್, ಕಾಲೇಜಿನ ಪ್ರಿನ್ಸಿಪಾಲ್ ಡಾ. ಯು.ಎಂ. ಭೂಶಿ, ಸಂಸ್ಥೆಯ ಆಡಳಿತಾಧಿಕಾರಿ ಡಾ. ಸಿ. ಕೆ. ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು. ಪ್ರತಿಭಾನ್ವೇಷಣೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಭಾನುವಾರ,12 ನವೆಂಬರ್ 2017 | ಪುಟಗಳು: 16+6+4(UDP8) | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 106
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ



ಅರುಣಾಚಲ ಭಾರತಕ್ಕೆ ಸೇರಿದ್ದು, ಇತರರ ನಿಲುವು ಲೆಕ್ಕಕ್ಕಿಲ್ಲ: ನಿರ್ಮಲಾ ಸೀತಾರಾಮನ್

ಶಶಿಕಲಾ, ದಿನಕರನ್ ಸಂಬಂಧಿಗಳಿಗೆ 3ನೇ ದಿನವೂ ಐಟಿ ಶಾಕ್ P01

ಆಸಿಯಾನ್ ಶೃಂಗದಲ್ಲಿ ಪಾಲ್ಗೊಳ್ಳಲು ಪ್ರಧಾನಿ ಮೋದಿ ಫಿಲಿಪ್ಪೀನ್ಸ್‌ಗೆ P10

# ವಿಜ್ಞಾನದಡೆಗೆ ಯುವ ಮನಸ್ಸುಗಳು!

**ಸಹ್ಯಾದ್ರಿಯಲ್ಲಿ ಸೈನ್ಸ್ ಟ್ಯಾಲೆಂಟ್ ಹಂಟ್ | ವಿಜ್ಞಾನ – ತಂತ್ರಜ್ಞಾನಗಳ 250 ಮಾಡೆಲ್‌ಗಳು | 1400 ವಿದ್ಯಾರ್ಥಿಗಳು ಭಾಗಿ**

**ವಿಕ ಸುದ್ದಿಲೋಕ** ಮಂಗಳೂರು

ವಿಜ್ಞಾನ- ತಂತ್ರಜ್ಞಾನದ ಅನ್ವೇಷಣೆ ಕಡೆಗೆ ಯುವ ವಿದ್ಯಾರ್ಥಿಗಳನ್ನು ಸೆಳೆಯುವ ನಿಟ್ಟಿನಲ್ಲಿ ಮಂಗಳೂರಿನ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ವತಿಯಿಂದ ಪಿಯುಸಿ ಮತ್ತು ಪ್ರೌಢಶಾಲೆ ವಿದ್ಯಾರ್ಥಿಗಳಿಗಾಗಿ ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಶನಿವಾರ ನಡೆಸಿದ 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್- 2017' ಕಾರ್ಯಕ್ರಮವನ್ನು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಏರೋಸ್ಪೇಸ್ ಎಂಜಿನಿಯರ್ ಪ್ರೊ. ಎಸ್.ಎನ್.ಓಂಕಾರ್ ಉದ್ಘಾಟಿಸಿದರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಮಂಜುನಾಥ ಭಂಡಾರಿ, ಸುರತ್ಕಲ್ ಎನ್‌ಐಟಿಕೆ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ವಿಜಯ್ ಎಚ್. ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿ.ನ ಸಹ ಸಂಸ್ಥಾಪಕ ಎಂ.ವಿ. ಸುಬ್ರಹ್ಮಣ್ಯ, ಕೆ. ಬಾಲಕೃಷ್ಣ ಭಂಡಾರಿ, ಮಹಾಬಲ ಶೆಟ್ಟಿ ಬೆಂಗಳೂರು, ವಿಜಯ ಕುಮಾರ್ ಶಿವಮೊಗ್ಗ, ನಾಗರಾಜ ಶೆಟ್ಟಿ, ಸೂರಜ್ ಶೆಟ್ಟಿ, ರಕ್ಷಿತ್, ಮಾಧ್ಯಮ ಸಲಹೆಗಾರ ವಸಂತ ಕೇದಗೆ ಉಪಸ್ಥಿತರಿದ್ದರು.





## 250 ಮಾಡೆಲ್‌ಗಳ ಪ್ರದರ್ಶನ

ಯುವ ಮನಸ್ಸುಗಳನ್ನು ವಿಜ್ಞಾನ- ತಂತ್ರಜ್ಞಾನದ ಕಡೆಗೆ ಒಯ್ಯುವ ನಿಟ್ಟಿನಲ್ಲಿ ನಗರ ಮತ್ತು ಗ್ರಾಮೀಣದ ಪ್ರದೇಶದ ಯುವ ಅನ್ವೇಷಕರನ್ನು ಅಲ್ಲಿ ಸೇರಿಸಲಾಗಿತ್ತು. ಸುಮಾರು 1400 ವಿದ್ಯಾರ್ಥಿಗಳು 250ಕ್ಕೂ ಹೆಚ್ಚು ಬಗೆಯ ವಿಜ್ಞಾನ ಮತ್ತು ತಂತ್ರಜ್ಞಾನದ ಮಾಡೆಲ್‌ಗಳೊಂದಿಗೆ ಸಿದ್ಧರಾಗಿದ್ದರು. ತಮ್ಮ ಮಾಡೆಲ್‌ಗಳ ಕುರಿತು ವೀಕ್ಷಕರಿಗೆ ವಿವರಣೆ ನೀಡುವ ವ್ಯವಸ್ಥೆಯನ್ನು ಕೂಡ ವಿದ್ಯಾರ್ಥಿ ತಂಡ ಸಿದ್ಧಪಡಿಸಿಕೊಂಡಿತ್ತು.

ಇದು ನಗರದ ಅಡ್ಯಾರು ಬಳಿಯ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಶನಿವಾರ ಬೆಳಗ್ಗೆ ಕಂಡು ಬಂದ ದೃಶ್ಯ. ವಿಜ್ಞಾನದ ಕಡೆಗೆ ಯುವ ಸಮುದಾಯವನ್ನು ಸೆಳೆಯುವ ನಿಟ್ಟಿನಲ್ಲಿ 'ಸಹ್ಯಾದ್ರಿ ಸೈನ್ಸ್ ಟ್ಯಾಲೆಂಟ್ ಹಂಟ್- 2017' ವಿಜ್ಞಾನ ಮತ್ತು ತಂತ್ರಜ್ಞಾನ ಮಾಡೆಲ್ ಹಾಗೂ ಪ್ರಾತ್ಯಕ್ಷಿಕೆ ಪ್ರದರ್ಶನವನ್ನು ಆಯೋಜಿಸಿತ್ತು. ಗ್ರಾಮೀಣ ಹಾಗೂ ನಗರ ಪ್ರದೇಶದ ಪದವಿಪೂರ್ವ ಹಾಗೂ ಪ್ರೌಢ ಶಾಲೆಯ ವಿದ್ಯಾರ್ಥಿಗಳನ್ನು ಅನ್ವೇಷಣೆಯಡೆಗೆ ಸೆಳೆಯುವ ನಿಟ್ಟಿನಲ್ಲಿ ಈ ಪ್ರಯತ್ನವನ್ನು ಸಹ್ಯಾದ್ರಿ ಸಂಸ್ಥೆಯು ಪ್ರತಿ ವರ್ಷ ನಡೆಸಿಕೊಂಡು ಬರುತ್ತಿದೆ. ನಂತರ ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಜ್ಞಾನಿಗಳು, ಉಪನ್ಯಾಸಕರು, ಸಂಶೋಧಕರೊಂದಿಗೆ ಹೊಸ ಹೊಸ ಆವಿಷ್ಕಾರಗಳ ಬಗ್ಗೆ ಚಿಂತಿಸುವ ಮತ್ತು ಇತರರ ಮೂಲಕ ಪ್ರೇರೇಪಣೆ ಪಡೆಯುವ ಮುಕ್ತ ಸಂವಹನ ನಡೆಯಿತು.

ದಕ್ಷಿಣ ಕನ್ನಡ, ಉಡುಪಿ ಹಾಗೂ ಶಿವಮೊಗ್ಗ ಜಿಲ್ಲೆಗಳ 70 ಪದವಿಪೂರ್ವ ಮತ್ತು ಪ್ರೌಢ ಶಾಲೆಗಳ 1400 ಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರು ವಿಜ್ಞಾನ ಮತ್ತು ತಂತ್ರಜ್ಞಾನ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಪ್ರದರ್ಶನ ಹಾಗೂ ಪ್ರಾತ್ಯಕ್ಷಿಕೆಯನ್ನು ಅಚ್ಚುಕಟ್ಟಾಗಿಸುವ ನಿಟ್ಟಿನಲ್ಲಿ ಮಂಗಳೂರು ನಗರ, ಮಂಗಳೂರು ಗ್ರಾಮಾಂತರ, ಉಡುಪಿ ಮತ್ತು ಶಿವಮೊಗ್ಗ ಎಂಬ ನಾಲ್ಕು ವಲಯಗಳನ್ನು ರಚಿಸಲಾಗಿತ್ತು. ಪ್ರದರ್ಶನಗೊಂಡ ಸುಮಾರು 250 ಮಾಡೆಲ್‌ಗಳನ್ನು ಸ್ಪರ್ಧೆಯಲ್ಲಿ ಆಯ್ಕೆ ಮಾಡಲು ವಿವಿಧ ಶಿಕ್ಷಣ ಸಂಸ್ಥೆಗಳ ಸುಮಾರು 80 ಮಂದಿ ತಜ್ಞರು ಭಾಗವಹಿಸಿದ್ದರು.

## ಸ್ಟಾರ್ಟ್ ಅಪ್‌ಗೆ ಪ್ರೋತ್ಸಾಹ

ಸಹ್ಯಾದ್ರಿ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಿಗೆ ಸ್ಟಾರ್ಟ್ ಅಪ್ ಅನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅಪ್ ಸ್ಕಿಲ್ಲಿಂಗ್ ಎಂಜಿನಿಯರ್ಸ್ ಸ್ಥಾಪಿಸಿದ ಕ್ಯಾಲಿಪರ್ ಎಂಜಿನಿಯರಿಂಗ್ ಮತ್ತು ಲ್ಯಾಬ್ ಪ್ರೈವೇಟ್ ಲಿಮಿಟೆಡ್‌ನ್ನು ಶನಿವಾರ ಉದ್ಘಾಟಿಸಲಾಯಿತು.

ಅಪ್ ಸ್ಕಿಲ್ಲಿಂಗ್ ಮೆಕಾನಿಕಲ್ ಎಂಜಿನಿಯರಿಂಗ್ ಡಿಫೆನ್ಸ್, ಏರೋಸ್ಪೇಸ್, ನ್ಯೂಕ್ಲಿಯರ್, ಆಯಿಲ್ ಮತ್ತು ಗ್ಯಾಸ್‌ನಂತಹ ಕೈಗಾರಿಕಾ ವಲಯವನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ವಿದ್ಯಾರ್ಥಿಗಳಿಗೆ ಇದು ಪ್ರಯೋಜನವಾಗಲಿದೆ.

ಇತರರು ಮತ್ತು ನಮ್ಮಲ್ಲಿರುವ ಸಾಮ್ಯ ಗುಣಗಳನ್ನು ಗುರುತಿಸಿಕೊಂಡು, ವ್ಯತ್ಯಾಸಗಳನ್ನು ಗೌರವಿಸುವ ರೂಢಿ ಬೆಳೆಸಿಕೊಂಡರೆ ಸಂಬಂಧಗಳು ಗಟ್ಟಿಗೊಳ್ಳುತ್ತವೆ.

ವಿಜಯವಾಣಿ 1

ಕನ್ನಡಿಗರ ಧ್ವನಿ

ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI ● MANGALURU | ಮಂಗಳೂರು ● ಸಂಪುಟ 6 ● ಸಂಚಿಕೆ 223

vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 12 ನವೆಂಬರ್ 2017 | ಭಾನುವಾರ


# ಸಹ್ಯಾದ್ರಿ ಕಾಲೇಜಿನಲ್ಲಿ ಪ್ರತಿಭಾನ್ವೇಷಣೆ ಸ್ಪರ್ಧೆ

## 250ಕ್ಕಿಂತಲೂ ಅಧಿಕ ಮಾದರಿ ಪ್ರದರ್ಶನ | 70 ಶಾಲಾ ಕಾಲೇಜುಗಳ 1400 ವಿದ್ಯಾರ್ಥಿಗಳು ಭಾಗಿ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ವಿಜ್ಞಾನ ದಿನದಿಂದ ದಿನಕ್ಕೆ ಬದಲಾಗುತ್ತಿದೆ. ಇದಕ್ಕೆ ಪೂರಕವಾಗಿ ಅನ್ವೇಷಣೆಗಳು ಆಗಬೇಕಾಗಿದೆ. ಯುವಕರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಶನಿವಾರ ಪಿಯುಸಿ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಪ್ರತಿಭಾನ್ವೇಷಣೆ ಸ್ಪರ್ಧೆ ನಡೆಯಿತು.

ಮಂಗಳೂರು ನಗರ, ಮಂಗಳೂರು ಹೊರವಲಯ, ಶಿವಮೊಗ್ಗ, ಕುಂದಾಪುರ ನಾಲ್ಕು ವಲಯಗಳಿಂದ 70 ಶಾಲಾ ಕಾಲೇಜುಗಳ 1400ರಷ್ಟು ವಿದ್ಯಾರ್ಥಿಗಳು ಈ ವಿಜ್ಞಾನ ಮಾದರಿಗಳ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದರು. 250ಕ್ಕೂ ಅಧಿಕ ವಿಜ್ಞಾನದ ವಿವಿಧ ಅನ್ವೇಷಣಾ ಮಾದರಿಗಳನ್ನು ಸ್ಪರ್ಧಿಗಳು ಪ್ರದರ್ಶಿಸಿದರು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಒಳ ಆವರಣದಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಏರೋಸ್ಪೇಸ್ ಇಂಜಿನಿಯರ್ ವಿಭಾಗದ ಪ್ರೊ.ಎಸ್.ಎನ್. ಓಂಕಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

80 ಮಂದಿ ಪ್ರಾಧ್ಯಾಪಕರು ಈ ಪ್ರದರ್ಶನದಲ್ಲಿನ ವಿಜ್ಞಾನ ಮಾದರಿಗಳ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿದ್ದರು. ವಿಜ್ಞಾನದ ವಿನೂತನ ಅವಿಷ್ಕಾರಗಳನ್ನು ವಿದ್ಯಾರ್ಥಿಗಳು ತಮ್ಮ ಆಲೋಚನೆ, ವಿಚಾರಗಳಿಗೆ ಒತ್ತು ನೀಡಿ ಮಾದರಿಗಳ ರೂಪದಲ್ಲಿ ಪ್ರದರ್ಶನ ಹಾಗೂ ವಿವರಣೆ ಮೂಲಕ ಗಮನ ಸೆಳೆದರು.

ಸಹ್ಯಾದ್ರಿ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ವಿದ್ಯಾರ್ಥಿಗಳು, ಎನ್‌ಐಟಿಕೆ, ಎನ್‌ಐಟಿ ಕ್ಯಾಲಿಕಟ್, ಎನ್‌ಐಟಿ ಸಿಕ್ಕಿಂ, ಐಐಟಿ ಗಾಂಧಿನಗರ, ಎನ್‌ಐಟಿಕೆ ವಾರಂಗಲ್, ಎಸ್‌ಆರ್‌ಎಂ ಯುನಿವರ್ಸಿಟಿ, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎನ್‌ಐಟಿ ಭೋಪಾಲ್, ಐಐಟಿ ಮುಂಬೈ ಮೊದಲಾದ ಪ್ರತಿಷ್ಠಿತ ಪ್ರದರ್ಶನಗಳಲ್ಲಿ ಭಾಗವಹಿಸಿ ಅಗ್ರ ಬಹುಮಾನಗಳನ್ನು ಪಡೆದಿರುವ ಆ್ಯಪ್ ಆಧಾರಿತ ವಿಜ್ಞಾನ ಮಾದರಿಗಳ ಪ್ರದರ್ಶನವನ್ನೂ ಈ ಸಂದರ್ಭ ಆಯೋಜಿಸಲಾಗಿತ್ತು.



ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ಪ್ರತಿಭಾನ್ವೇಷಣೆ ಸ್ಪರ್ಧೆಯನ್ನು ಪ್ರೊ.ಎಸ್.ಎನ್.ಓಂಕಾರ್ ಉದ್ಘಾಟಿಸಿದರು.

**ವೈಜ್ಞಾನಿಕ ಪ್ರತಿಭೆ** ತ್ಯಾಜ್ಯಗಳನ್ನು ಉಪಯೋಗಿಸಿ ಅದಕ್ಕೆ ತಾಂತ್ರಿಕ ಸ್ಪರ್ಶ ನೀಡಲಾದ ವಿಜ್ಞಾನ ಮಾದರಿಗಳು ಪ್ರದರ್ಶನದಲ್ಲಿದ್ದವು. ಜೈವಿಕ ತಂತ್ರಜ್ಞಾನ, ಮಾನವನ ಒಳ ಅಂಗಾಂಗಳ ರಚನೆ, ವ್ಯಾಕ್ಯೂಮ್ ಕ್ಲೀನರ್, ನೀರು ಶುದ್ಧೀಕರಣ ಘಟಕ, ಸ್ಟೋರೇಜ್ ಹೌಸ್, ಇಲೆಕ್ಟ್ರಿಫೈಯಿಂಗ್ ಪೇಂಯ್ಟ್, ಹ್ಯೂಮನಾಯ್ಡ್ ರಾಬಟ್ ಹೀಗೆ ವಿವಿಧ ಮಾದರಿಗಳು ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳ ವೈಜ್ಞಾನಿಕ ಪ್ರತಿಭೆಗೆ ಸಾಕ್ಷಿಯಾಗಿದ್ದವು.

ರಾಷ್ಟ್ರೀಯ, ಅಂತಾರಾಷ್ಟ್ರೀಯ ವಿಜ್ಞಾನಿಗಳು, ಉಪನ್ಯಾಸಕರು, ಸಂಶೋಧನಾಕಾರರೊಂದಿಗೆ ಹೊಸ ಆವಿಷ್ಕಾರಗಳ ಬಗ್ಗೆ ಚಿಂತಿಸುವ ಮತ್ತು ಉದ್ದೇಶದಿಂದ ವಿದ್ಯಾರ್ಥಿಗಳು ಮುಕ್ತ ಸಂವಾದ ನಡೆಸಿದರು.

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ್ ಭಂಡಾರಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಿರ್ದೇಶಕ ಡಾ.ಡಿ.ಎಲ್. ಪ್ರಭಾಕರ್, ಸುರತ್ಕಲ್ ಎನ್‌ಐಟಿಕೆಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ವಿಜಯ ಎಚ್. ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ವಿ. ಸುಬ್ರಹ್ಮಣ್ಯನ್, ನಾಗರಾಜ ಶೆಟ್ಟಿ, ವಿಜಯ ಕುಮಾರ್, ಸೂರಜ್ ಶೆಟ್ಟಿ, ರಕ್ಷಿತ್ ಹಾಗೂ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ.ಯು.ಎಂ.ಭೂಷಿ, ಸಂಸ್ಥೆ ಆಡಳಿತಾಧಿಕಾರಿ ಡಾ.ಸಿ.ಕೆ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಮುಂಜಾನೆ ಮಾತು
ಇತರರು ಮತ್ತು ನಮ್ಮಲ್ಲಿರುವ ಸಾಮ್ಯ ಗುಣಗಳನ್ನು ಗುರುತಿಸಿಕೊಂಡು, ವೈತ್ಯಾಸಗಳನ್ನು ಗೌರವಿಸುವ ರೂಢಿ ಬೆಳೆಸಿಕೊಂಡರೆ ಸಂಬಂಧಗಳು ಗಟ್ಟಿಗೊಳ್ಳುತ್ತವೆ.

ವಿಜಯವಾಣಿ
ಕನ್ನಡಿಗರ ಧ್ವನಿ
ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ | VIJAYAVANI • MANGALURU | ಮಂಗಳೂರು • ಸಂಪುಟ 6 • ಸಂಚಿಕೆ 223
vijayavani.net | ಇ-ಪೇಪರ್: epapervijayavani.in | VVani4U | @VVANI4U | vijayavaninews@gmail.com | ಸಹಾಯವಾಣಿ: 8884411682 | 12 ನವೆಂಬರ್ 2017 | ಭಾನುವಾರ



# ಹಣಕಾಸು ಸಮಸ್ಯೆ ಸಂಶೋಧನೆಗೆ ಅಡ್ಡಿಯಾಗದು

## ಸಹ್ಯಾದ್ರಿ ಕಾಲೇಜು ಪ್ರತಿಭಾನ್ವೇಷಣೆ ಸ್ಪರ್ಧೆ ಸಮಾರೋಪದಲ್ಲಿ ಪ್ರೊ.ಓಂಕಾರ್ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಅನ್ವೇಷಣೆಗೆ ಆರ್ಥಿಕ ಸಂಪನ್ಮೂಲದ ಅವಶ್ಯಕತೆಯಿಲ್ಲ. ಜಗತ್ತಿನಲ್ಲಿ ನಡೆದ ಯಶಸ್ವಿ ಅನ್ವೇಷಣೆಗಳು ಗರಿಷ್ಠ ಆರ್ಥಿಕ ಹೂಡಿಕೆಯಿಂದ ಆಗಿಲ್ಲ. ಸಾಮಾನ್ಯ ಅನ್ವೇಷಣೆಗಳನ್ನೇ ಅಭಿವೃದ್ಧಿಪಡಿಸಿ ಲೋಕಕ್ಕೆ ಪರಿಚಯಿಸಲಾಗಿದೆ. ಆದ್ದರಿಂದ ಆರ್ಥಿಕವಾಗಿ ಸದೃಢನಲ್ಲ ಎನ್ನುವ ಕಾರಣದಿಂದ ಅನ್ವೇಷಣೆಯಿಂದ ಹಿಂದಕ್ಕೆ ಸರಿಯಬಾರದು ಎಂದು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಏರೋಸ್ಪೇಸ್ ಇಂಜಿನಿಯರ್ ವಿಭಾಗದ ಪ್ರೊ.ಎಸ್.ಎನ್.ಓಂಕಾರ್ ಅಭಿಪ್ರಾಯಪಟ್ಟರು.

ಸಹ್ಯಾದ್ರಿ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಶನಿವಾರ ಪಿಯುಸಿ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಕಾಲೇಜು ಆವರಣದಲ್ಲಿ ಹಮ್ಮಿಕೊಂಡ ಪ್ರತಿಭಾನ್ವೇಷಣೆ ಸ್ಪರ್ಧೆಯ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಯುವ ಅನ್ವೇಷಕರ ಪ್ರತಿಭೆಯನ್ನು ಪ್ರದರ್ಶಿಸಲು ಸಹ್ಯಾದ್ರಿ ಕಾಲೇಜು ಅವಕಾಶ ಕಲ್ಪಿಸಿರುವುದು ಶ್ಲಾಘನೀಯ. ಇದರಿಂದ ಅವರ ಸಾಧನೆಗೆ ಇನ್ನಷ್ಟು ಪ್ರೋತ್ಸಾಹ ಲಭಿಸಿದಂತಾಗುತ್ತದೆ. ಅನ್ವೇಷಣೆಗೆ ಹೊಸ ಯೋಚನೆಗಳು ಮೂಡಲು ಪೂರಕವಾಗುತ್ತದೆ ಎಂದು ಹೇಳಿದರು.




**ಅಡ್ಯಾರ್ ಸಹ್ಯಾದ್ರಿ ಕಾಲೇಜಿನಲ್ಲಿ ನಡೆದ ಪ್ರತಿಭಾನ್ವೇಷಣೆ ಸ್ಪರ್ಧೆಯಲ್ಲಿ ವಿಜೇತರಿಗೆ ಅತಿಥಿಗಳು ಬಹುಮಾನ ವಿತರಿಸಿದರು.**

ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮಂಜುನಾಥ ಭಂಡಾರಿ ಮಾತನಾಡಿ, ಯುವ ವಿದ್ಯಾರ್ಥಿಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಪ್ರತಿಭಾನ್ವೇಷಣೆ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಎಲ್ಲ ಕಾಲೇಜುಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ ಎಂದರು.

ಸುರತ್ಕಲ್ ಎನ್‌ಐಟಿಕೆಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ವಿಜಯ ಎಚ್.ದೇಸಾಯಿ, ಫ್ಯೂಚರ್ ಫೋಕಸ್ ಇನ್ಫೋಟೆಕ್ ಪ್ರೈವೇಟ್ ಲಿಮಿಟೆಡ್‌ನ ಸಹ ಸಂಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕ ಎಂ.ವಿ. ಸುಬ್ರಹ್ಮಣ್ಯನ್, ಅಂಕಣಕಾರ ಬಸನಗೌಡ ಎಂ.ಪಾಟೀಲ್, ಸಹ್ಯಾದ್ರಿ ಶಿಕ್ಷಣ ಸಂಸ್ಥೆ ನಿರ್ದೇಶಕ ಡಾ.ಡಿ.ಎಲ್.ಪ್ರಭಾಕರ್, ಕಾಲೇಜು ಪ್ರಾಂಶುಪಾಲ ಡಾ.ಯು. ಎಂ.ಭೂಷಿ, ಸಂಸ್ಥೆ ಆಡಳಿತಾಧಿಕಾರಿ ಡಾ.ಸಿ.ಕೆ.ಮಂಜುನಾಥ್ ಮೊದಲಾದವರು ಉಪಸ್ಥಿತರಿದ್ದರು. ಪ್ರತಿಭಾನ್ವೇಷಣೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.